ಕರ್ನಾಟಕ ಸರ್ಕಾರ

ಸಂ: ಉತಇ/ತರಬೇತಿ/ತ-1/ವಿವ-24/2012-13

ಆಯುಕ್ತರ ಕಛೇರಿ,
ಉದ್ಯೋಗ ಮತ್ತು ತರಬೇತಿ ಇಲಾಖೆ,
ಕೌಶಲ್ಯ ಭವನ. ಡೈರಿ ಸರ್ಕಲ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029.
ದಿನಾಂಕ: 17-09-2012.

# ಸು ತ್ತೋ ಲೆ

ವಿಷಯ:- 2012-13ನೇ ಸಾಲಿನಿಂದ ಸ.ಕೈ.ತ.ಸಂ.ಗಳಲ್ಲಿ ತರಬೇತಿದಾರರ ಸಮವಸ್ತ್ರ ಬದಲಾವಣೆ ಮಾಡುವ ಬಗ್ಗೆ.

ಉಲ್ಲೇಖ:- ಇದೇ ಸಮಸಂಖ್ಯೆ ಸುತ್ತೋಲೆ ದಿ.28-08-2012.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಏಕರೂಪದ ಸಮವಸ್ತ್ರ ಅಳವಡಿಸುವ ವಿಷಯವಾಗಿ ಮಾದರಿಗಳನ್ನು ಗುರುತಿಸಿ ಜಾರಿಗೊಳಿಸಲು ತಿಳಿಸುವುದಾಗಿ ಉಲ್ಲೇಖಿತ ಸುತ್ತೋಲೆ ಹೊರಡಿಸಲಾಗಿತ್ತು. ಅದರಂತೆ 2012-13ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಎಲ್ಲಾ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಹಾಲಿ ಇರುವ ಸಮವಸ್ತ್ರದ ಬದಲಿಯಾಗಿ ಪುರುಷ ಹಾಗೂ ಮಹಿಳಾ ತರಬೇತಿದಾರರಿಗೆ ಲಗತ್ತಿಸಿರುವ ಮಾದರಿ ಬಣ್ಣದ ಸಮವಸ್ತ್ರವನ್ನು ಜಾರಿಗೆ ಬರುವಂತೆ ಆದೇಶಿಸಲಾಗಿದೆ. ಈ ವಿಷಯವಾಗಿ ಎಲ್ಲಾ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರುಗಳು ಅಗತ್ಯ ಕ್ರಮ ತೆಗೆದುಕೊಳ್ಳಲು ತಿಳಿಸಲಾಗಿದೆ.

ಮುಂದುವರೆದು, ರಾಜ್ಯದ ಎಲ್ಲಾ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ತರಬೇತಿದಾರರುಗಳಿಗೆ ಇಲಾಖೆಯಿಂದಲೇ ಉಚಿತವಾಗಿ ಸಮವಸ್ತ್ರವನ್ನು ಒದಗಿಸಲಾಗುವುದು ಎಂದು ತಿಳಿಸಲಾಗಿದೆ.

ಆಯುಕ್ತರು ಕರಡು ಪ್ರತಿಯನ್ನು ಒಪ್ಪಿರುತ್ತಾರೆ.

ಜಂಟೀ ನಿರ್ದೇಶಕರು(ತರಬೇತಿ),
ಉದ್ಯೋಗ ಮತ್ತು ತರಬೇತಿ.

ಗೆ,
ಪ್ರಾಚಾರ್ಯರು,
ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ,

---

ಪ್ರತಿಯನ್ನು:-
ಜಂಟೀ ನಿರ್ದೇಶಕರು(ತರಬೇತಿ), ವಿಭಾಗೀಯ ಕಛೇರಿ, ಬೆಂಗಳೂರು/ಮೈಸೂರು/ಹುಬ್ಬಳ್ಳಿ/ಗುಲ್ಬರ್ಗಾ ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ.

